ನುಗಳನ್ನು ಮಾಲ್‌ಕಿ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮಿನು ಸ್ವಾಧೀನವಾದ ಲಾಗಾಯತು ಒಂದು ವರುಷದಲ್ಲಿ (10) ವಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ವಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ವಳಗೆ ಗ್ರಾಮ ಆಬಾದು ಮಾಡಲು ಖಾತರಿ ಬಗ್ಗೆ ವಂದನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರೆವಾರ್ ಗ್ರಾಮಕಟ್ಟಿ 10 ವಕ್ಕಲು ತಂದು ಇಡಲು ಚಪ್ಪದರೆ ಡಿಪಾಜಿಟ್ ಇಡುವ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬರ್ಯಾ ನೂಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ನ್ಯಾಯದೆ ಮತ್ತು ಅನುಕೂಲವಾದ ಸವಾಲ್ ಮಾಡಿ ಜಮಿರ್ಾ ಪಡಿಯಲು ಇಚ್ಛೈಯುಳ್ಳವರು ಈ ಇಸ್ತಿಹಾರ್ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಶೀಕೆರೆ ತಾಲ್ಲೂಕು ಅಮಲ್ದಾರ್ರಲ್ಲಿ ದರಖಾಸ್ತು ಮಾಡಬಹುದು.

ಈ ವೇರೆ ಹಾಲೆ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈಸಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಸಾಗುವಳಿಗೋಸ್ಕರ ಜಮಿರ್ಾ ಹಿಡುವಳಿ ಹರಾಜ್.

ಇಸ್ತಿಹಾರ್‌ನಾಮೆ.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ವೇರೆ ಇದರಡೀಲಿ ಕಂಡ ಜಮಿರ್ಾ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈಪಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಕೇಸಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಪ್ಪ ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗ ಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯೂಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯೂಟಿ ಕಮ್ಮಿಷನರ ಮಂಜೂರಾತಿಗೆ ಬಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯ್ಗಿಂತಿಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದನಂತರ ಜಮಿನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅರ್ಜೆಡಿಕ್ಸ್ "ಡಿ" ಯೆಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲಿಗೆಳು ಏನಾದರೂ ಆದರೆ ಅವುಗಳೆಲ್ಲಾ ನ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್ತು ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನು. ಸರ್ವೇ ನಂಬರು.	ಬಾಬು ಮಿಷ್ಕೀ ತರೀ ಬಾಗಾಯತ ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭೂವಿಗಳು ಕೊಡಿಪ ನಮ್ಮಿಗೆ ಕರಾರ್ಯಕಾ ತಮ್ಮಲ್ಲಿ	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡೆಸತಕ್ಕವರ ಹೆಸರು.	ಹರಾಜಿನಲ್ಲಿ ಕೊಳ್ಳುವವರು ಸರ್ಕಾರದ ಸಾಲ ಅಥವಾ ಇತರ ಪಟ್ಟಿ ಬೊಮ್ಮಲಿಗೂ ಪಟ್ಟಿ.
1.	2	3	4	5	6	7	8	9	10	11
ಚನ್ನರಾಯಪಟ್ಟಣ.	ಹಾಸನ.	ಬಿಸಲಹಳ್ಳಿ.	51	ತರೀ	1—24			ಜಮೀನು ಬಿಟ್ಟಿ, ದಿವಿ ಸೂಂಟಿ ಹನ್ನೊಂದರ ಪೂರೂ, ತಾರೀಖು 5—2—96.	ಅನುಕೂದಾರ್ರು ಯೂ ಶಿರಸ್ಟೇದಾರು.	ಹರಾಜಿನಲ್ಲಿ ಪಡೆದವರು ಸ್ವೀಕೃತಿಯಿಂದ ಮೊಕರೂರಾಗುವ ದರದಂತೆ ಕಂದಾಯವನ್ನು ಅದುವರಿಗೂ ಹಂಗಾ ನಿಮಾ ದರದಂತೆ ಜಂದಾಯವನ್ನು ಬೂಂದು ಲಾಗವಸು ಮತ್ತು ಕ್ಲಾಸುಗಳ ಕವಮ್ಮತು ಸಹ ಕೊಡಬೇಕು. 1896—97ನೇ ಇಸವಿ ಲಾಗುರುವುದು ಜದೇ ಕಂದಾಯ ವಸೂಲ್ ಮಾಡುವುದಿ.
			5	ಡಿಟೋ	2— 1					
			6	ಡಿಟೋ	2— 3					
			9	ಡಿಟೋ	2—21					
			10	ಡಿಟೋ	1—21					
			11	ಡಿಟೋ	0— 5					
			34							
			1	ಡಿಟೋ	1—16					
			46							
			1	ಡಿಟೋ	0— 4					
			47							
			4	ಡಿಟೋ	1— 4					
			51							
			4	ಡಿಟೋ	0— 5					
			52							
			2	ಖುಷ್ಕಿ	0—30					
			57							
		ಜೋಳೀನಹಳ್ಳಿ.	257	ತರೀ	1—37					
			1							
			257	ಡಿಟೋ	2—33					
			2							
					18—4					

ಜೆ. ಡಬ್ಲಿಯು. ಸ್ಮೈಟ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 21ನೇ ಡಿಸೆಂಬರ್ 1895.

1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಕಲಂ ಅನುಸರಿಸಿ, ಇದರಡಿ ನಮೂದಾಗುವ ಸರ್ಕಾರೀ ಜಂಗಲ್‌ಗಳು, ಪ್ಲಾಂಟೇಷನ್‌ಗಳು ಮತ್ತು ಸಂದಲ್ ರಿಜರ್ವ್‌ಗಳು ಸಹ ಬಿಸಲು ಕಾಲಕ್ಕಾಗಿ 1896ನೇ ಇಸವಿ ಫಿಬ್ರವರಿ ಗುರ್ರೇ ಲಾಗಾಯ್ತು ಮೇ ಆಖೈರ್ ವರಿಗೆ ಬಂದ್ ಮಾಡಲ್ಪಡುವವು. ಬೇಟೆಗಾರರೂ ಮತ್ತು ಇತರ ಜನಗಳೂ ಅಪ್ಪಣೆ ಇಲ್ಲದೆ ಮೇಲ್ಕಂಡ ಫಾರೆಸ್ಟ್ ಪ್ಲಾಂಟೇಷನ್ ಮತ್ತು ಸಂದಲ್ ರಿಜರ್ವ್‌ಗಳಲ್ಲಿ ಪ್ರವೇಶ ಮಾಡಿದರೆ ಪ್ರಾಸಿಕ್ಯೂಷನಿಗೆ ಗುರಿಯಾಗುವರು.